ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Thursday, the 10th August 1978/Shravana 19, 1900 S.E.

The House met in the Assembly Chamber, Vidhana Soudha, at One of the Clock.

[MR. SPEAKER (SRI P. VENKATARAMANA) in the Chair]

STARRED QUESTIONS
(to which oral answers were given)

Utilising Yagachi River Water

85. SRI K.H. HANUME GOWDA (Hassan).—Will the Chief Minister be pleased to state.—

(*a*) whether any survey has been conducted to utilise the water Joining the Arabian Sea now without being used by diverting the same to Yagachi basin and whether any estimate has been prepared;

(*b*) whether Government intend to utilise the said water for providing permanent relief to the chronically scarcity affected areas?

SRI D. DEVARAJ URS (Chief Minister).—

(*a*) No.

(*b*) Yes. But, it is not possible to utilise the water for Yagachi Basin.

ಶ್ರೀ ಕೆ. ಹೆಚ್. ಹನುಮೇಗೌಡ.— ಸ್ವಾಮಿ, ಈ ರೀತಿ ಅನುಪಯುಕ್ತವಾಗಿ ಹರಿದು ಹೋಗುವ ನೀರನ್ನು ಆಗಾಗ್ಗೆ ಬರಗಾಲಕ್ಕೆ ತುತ್ತಾಗುವ ಪ್ರದೇಶಕ್ಕೆ ಶಾಶ್ವತ ಪರಿಹಾರಕ್ಕೆ ಉಪಯೋಗಿಸಲು ಸರಕಾರ ಉದ್ದೇಶಿಸಿದೆಯೇ ಎಂದು ಕೇಳಿದಕ್ಕೆ ಇಲ್ಲ ಎಂದು ಉತ್ತರದಲ್ಲಿ ಹೇಳಿದ್ದೀರಿ. ಆದರೆ ಯಗಚಿ ಜಲಾನಯನ ಪ್ರದೇಶಕ್ಕೆ ಇದರ ಉಪಯೋಗ ಸಾಧ್ಯವಿಲ್ಲ ಎಂದು ಹೇಳಿದ್ದೀರಿ. ಇವೊತ್ತು ಬಾಳೆಹೊನ್ನೂರು ಹತ್ತಿರ ಒಂದು ಡೈವರ್‌ಷನ್ ಡ್ಯಾಮ್ ಕಟ್ಟಿದ್ದರೆ ಯಗಚಿ ಜಲಾನಯನ ಪ್ರದೇಶಕ್ಕೆ ನೀರನ್ನು ಹರಿಸ ಬಹುದು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ ಎನ್ನುವುದನ್ನು ನಾನು ಪೇಪರಿನಲ್ಲಿ ಓದಿದ್ದೇನೆ. ಆ ರೀತಿ ಏನಾದರೂ ಬಾಳೆಹೊನ್ನೂರು ಹತ್ತಿರ ಸರ್ವೆ ಆಗಿದ್ದರೆ ಮಾನ್ಯ ಮುಖ್ಯ ಮಂತ್ರಿಗಳು ತಿಳಿಸ ಬೇಕು?

† ಶ್ರೀ ಡಿ. ದೇವರಾಜ್ ಅರಸ್.—ಪಶ್ಚಿಮ ಘಟ್ಟಗಳಿಂದ ಹೋಗುವುದನ್ನು ತಡಿಸುವುದು ಸಾಧ್ಯವೇ? ಬಾಳೆಹೊನ್ನೂರು ಕಡೆ ಹೋಗುವುದು ಪಶ್ಚಿಮದ ಕಡೆ ಹೋಗುತ್ತದೆಯೇ?

---

† indicates that remarks or speeches have not been revised by the member concerned.

ಶ್ರೀ ಕೆ. ಹೆಚ್. ಹನುಮೇಗೌಡ.—ಪೂರ್ವಕ್ಕೆ ಡೈವರ್‌ಷನ್ ಮಾಡಲಿಕ್ಕೆ ಸಾಧ್ಯ ಇದೆ. ಬಾಳೆ ಹೊನ್ನೂರು ಹತ್ತಿರ ಡ್ಯಾಮ್ ಕಟ್ಟಿದ್ದರೆ ಪೂರ್ವಕ್ಕೆ ನೀರು ತಿರುಗಸಲಿಕ್ಕೆ ಸಾಧ್ಯ ಇದೆ.

ಶ್ರೀ ಡಿ. ದೇವರಾಜ್ ಅರಸ್.—ಪಶ್ಚಿಮ ಘಟ್ಟದ ವಾಟರ್, ಪೂರ್ವದ ಕಡೆ, ಕರಾವಳಿ ಕಡೆ ಹೋಗುತ್ತದೆಯೇ? ತಾವು ಅದನ್ನು ನೋಡಿಲ್ಲ ಎಂದು ಕಾಣುತ್ತದೆ. ಯಗಚಿ ರಿವರ್‌ಗೆ ಪಶ್ಚಿಮ ಘಟ್ಟದಿಂದ ನೀರು ತರಬೇಕಾದರೆ ಬೆಟ್ಟ ಕೊರೆಯುವುದು ಒಂದೇ ದಾರಿ. ನೀವು ಕೇಳಿರುವ ಪ್ರಶ್ನೆ ಪ್ರಕಾರ ಇದು ಸಾಧ್ಯವಿಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.—ಇವೊತ್ತು ಯಗಚಿ ಜಲಾನಯನ ಪ್ರದೇಶಕ್ಕೆ ನೀರು ತರಲಿಕ್ಕೆ ಸಾಧ್ಯವಿಲ್ಲದಿದ್ದರೆ ಕಾವೇರಿ ಜಲಾನಯನ ಪ್ರದೇಶದ ನೀರು ಪಶ್ಚಿಮ ಘಟ್ಟಕ್ಕೆ ಅನುಪಯುಕ್ತವಾಗಿ ಹರಿದು ಹೋಗುವುದನ್ನು ತಡೆಯುವ ಬಗ್ಗೆ ಸರ್ವೆ ನಡೆದಿದೆ ಎಂದು ಕೇಳಿದ್ದೇನೆ. ಇದನ್ನು ಡೈವರ್ಟ್ ಮಾಡಿಕೊಂಡರೆ ಯಗಚಿ ಪ್ರಾಜೆಕ್ಟ್ ಕಟ್ಟಿ ಪ್ರತಿ ವರ್ಷ ಬರಗಾಲಕ್ಕೆ ತುತ್ತಾಗುವ ಪ್ರದೇಶಕ್ಕೆ ಶಾಶ್ವತ ಪರಿಹಾರ ಕೊಡಲಿಕ್ಕೆ ಸಾಧ್ಯವಿಲ್ಲವೇ?

ಶ್ರೀ ಡಿ. ದೇವರಾಜ್ ಅರಸ್.—ಅದನ್ನು ನೋಡಿಸೋಣ.

Making proper arrangements for Vendors of Betel Leaves, Fruits and Flowers in Mysore City.

402. SRI H. GANGADHARAN (Krishnaraja).—Will the Minister for Municipal Administration be pleased to state.—

(*a*) whether it has come to the notice of the Government that hundreds of women beloging to weaker section in Mysore City do flower, Fruit & Betel leaves vending by carrying the baskets on their head during busy hours;

(*b*) whether it is a fact that the Police by filing suits against them in the Court are harassing them;

(*c*) if so, whether the Government intend to provide permanent relief to enable them to eke out their livelihood?

SRI H. C. SRIKANTAIAH (Minister for Municipal Administration).—

(*a*) Yes.

(*b*) No.

(*c*) It will be considered.

ಶ್ರೀ ಎಚ್. ಗಂಗಾಧರನ್.—ಸ್ವಾಮಿ, ನನ್ನ ಮೊದಲ ಪ್ರಶ್ನೆಗೆ ಹಣ್ಣು ಮಾರುವವರ ಮತ್ತು ಹೂವು ಮಾರುವವರ ಬಗ್ಗೆ ತಮ್ಮ ಗಮನಕ್ಕೆ ಬಂದಿದೆ ಎಂದು ಹೇಳಿದ್ದೀರಿ. ಅವರು ಮಾರ್ಕೆಟ್ ಬಳಿ ಮಾರುವುದರಿಂದ. ಅಲ್ಲಲ್ಲೇ ಕುಳಿತುಕೊಳ್ಳುತ್ತಾರೆ ಎಂದು ಪೋಲೀಸಿನವರು ಅವರ ಮೇಲೆ ಕೋರ್ಟಿನಲ್ಲಿ ಕೇಸ್ ಹಾಕಿ ಪ್ರತಿ ವಾರ ಜುಲ್ಮಾನೆ ಹಾಕುತ್ತಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ?

† ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ತಾವು ಕೇಳಿರತಕ್ಕದ್ದು ತಲೆಯಮೇಲೆ ಹೂತ್ತು ಮಾರುವವರ ಮೇಲೆ ಮೊಕದ್ದಮೆ ಹೂಡಿ ಅವರನ್ನು ಸಂಕಷ್ಟಕ್ಕೆ ಗುರಿಪಡಿಸುತ್ತಿರುವುದು ನಿಜವೆ ಎಂದು ಕೇಳಿದ್ದೀರಾ, ಅದಕ್ಕೆ ನಿಜವಲ್ಲ ಎಂದು ಹೇಳಿದ್ದೇವೆ. ಇವೊತ್ತು ತಲೆಯ ಮೇಲೆ ಹೊತ್ತು ಮಾರುವವರ ಬಗ್ಗೆ ಕಾರ್ಪೊರೇಷನ್ ಪೋಲೀಸರು ಯಾವ ಕೇಸ್ ಹಾಕಿಲ್ಲ. ರಸ್ತೆಯ ಬದಿಗಳಲ್ಲಿ ಕುಳಿತು ಪಾದಚಾರಿಗಳಿಗೆ ವ ತ್ತು ವಾಹನ ಸಂಚಾರಕ್ಕೆ ಅಡ್ಡಿಯುಂಟು ಮಾಡಿರುವವರಿಗೆ ಜುಲ್ಮಾನೆ ಹಾಕಿದೆ.